ವುಗಳಾಗಿವೆ. ಅವರು ಆ ದರ್ಜೆಗೆ ನಮ್ಮ ಕೆಲವು ಅಧಿಕಾರಿಗಳನ್ನೂ ಏರಿಸಿರುವುದರಿಂದ ಸಂಸ್ಥಾನದ ಸರ್ಕಾರಗಳೂ ಕೂಡ ಆ ಪಾಲಸಿಯ ವಿಚಾರಕ್ಕೊಳ ಗಾಗಿ ಹಾಗೆ ಹೆಚ್ಚಿನ ಸಂಬಳ ಕೊಡಬೇಕಾಗಿದೆ. ಆದರೆ ಇದೊಂದು ಸ್ಟೇಟ್ ಪಾಲಸಿಯೇನೂ ಅಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಐ. ಪಿ. ಎಸ್. ದರ್ಜೆಯ ಅಧಿಕಾರಿಗಳು ಕೆಲವರು ನಮ್ಮ ಸಂಸ್ಥಾನ ದಲ್ಲೂ ಇದ್ದಾರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಈಗತಾನೆ ಇದ್ದಾರೆಂದು ಹೇಳಿದೆನು.

ಶ್ರೀ ಬಿ. ಎನ್. ಬೋರಣ್ಣಗೌಡ.—ಹೀಗೆ ಒಂದೇ ಕಡೆ ಇಷ್ಟೊಂದು ವ್ಯತ್ಯಾಸವಿರುವುದರಿಂದ ಉಳಿದವರಿಗೆ ಒಂದು ಅತೃಪ್ತಿ ಉಂಟಾಗುವುದಿಲ್ಲವೇ ?

Sri H. SIDDAVEERAPPA.—It is for reasons beyond the control of Government. When an officer has been appointed to I.P.S., he is entitled as a matter of right to have pay according to the scale.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈಗ ನಮ್ಮಲ್ಲಿ ಆ ದರ್ಜೆಗೆ ಸೇರಿರತಕ್ಕವರು 13 ಜನರು ಮಾತ್ರ ಇದ್ದಾರೆ. ಇನ್ನು ಕೆಲವರಿಗೆ, ತೀರಾ ವಯಸ್ಸಾಗಿಮ್ಮು ಈ ಪರೀಕ್ಷೆ ಪಾಸ್‌ಮಾಡಲು ಅನಾನುಕೂಲವಾಗಿರತಕ್ಕ ವರಿಗೆ ತಾವು ಒಂದು ಅನುಕೂಲ ಮಾಡಲು ಆಲೋಚನೆ ಮಾಡುತ್ತೀರಾ ?

Sri H. SIDDAVEERAPPA.—However much I sympathise, the difficulty is one of finance.

ಶ್ರೀ ಬಿ. ಎಚ್. ಬೋರಣ್ಣಗೌಡ.—ತಾವು ಈ ಐ ಪಿ. ಎಸ್. ನವರಿಗೆ ಕೊಡಲಾಗುತ್ತಿರುವ, ಎಂದರೆ, ಉಡುಪು ಇತ್ಯಾದಿಗಳ ಬಗ್ಗೆ ಕೊಡುತ್ತಿರುವ 1,000 ರೂ.ಗಳ ಸಂಭಾವನೆಯನ್ನಾದರೂ ಇತರರಿಗೂ ದೊರ ಕುವಂತೆ ಮಾಡಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಮುಂದೆ ಆ ಬಗ್ಗೆ ಒಂದು ಆಲೋಚನೆಯೂ ಇದೆ.

Experiments in growing paddy according to the Japanese system.

Q.—627. **Sri D. R. KARI GOWDA** (Hassan Taluk).—

Will the Government be pleased to state :—

the steps taken by them to conduct experiment in growing paddy according to the Japanese system in the State ?

A.—**Sri H. SIDDAVEERAPPA** (Minister for Home and Industries).—

A concerted drive to popularise the method will be taken up this year. A target of 20,000 acres for the monsoon season has been fixed for popularising the method in the first year. Improved paddy for seed purposes in all the districts is proposed to be distributed. Two thousand pallas of green manure seeds, 2,000 tons of super and 5,000 tons of Ammonium Sulphate will be stocked for distribution. Considerable quantity of Sindri Ammonium Sulphate will be procured to build up stocks.

ಶ್ರೀ ಡಿ. ಆರ್. ಕರಿಗೌಡ.—ತಾವು ಉತ್ತರದಲ್ಲಿ ತಿಳಿಸಿರುವ 20 ಸಾವಿರ ಎಕರೆಗಳ ಬಗ್ಗೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆಗಳೆಂಬುದನ್ನು ತಿಳಿಸು ವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಯೋಜನೆಯನ್ನೂ ಪರ್ಯಾಲೋಚನೆಯಲ್ಲಿದೆ. ಪೂರ್ತಿಯಾಗಿ ತೀರ್ಮಾನ ವಾಗಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಭತ್ತ ಹಂಚಬೇಕೆಂದು ಯೋಚಿಸಿದ್ದೀರ ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಈ ಬಗ್ಗೆ ಸಲಹೆ ಕೊಟ್ಟರೆ ಮುಂದೆ ಪರ್ಯಾಲೋಚನೆ ಯಾಗುವುದು. ಉತ್ತಮವಾಗಿದ್ದರೆ ಅಂಗೀಕರಿಸಲಾ ಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ತಮ್ಮ ಯೋಜನೆಯಲ್ಲಿ ಯಾರಾದರೂ ಹಳ್ಳಿಯವರು ಬಂದು ತಮ್ಮ ನಿಯಮಗಳ ಪ್ರಕಾರ ಬೆಳೆ ಬೆಳೆಯುವುದಾಗಿ ತಿಳಿಸಿದರೆ ತಾವು ಅವರಿಗೆ ಅನುಕೂಲ ಕಲ್ಪಿಸಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕಲ್ಪಿಸಿಕೊಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ತಾವು ಇಲ್ಲಿ ತಿಳಿಸಿರುವ ಬೀಜ, ಗೊಬ್ಬರ ಇವುಗಳನ್ನು ರೈತರಿಗೆ ಮುಫತ್ತಾಗಿ ಕೊಡುತ್ತೀರೋ ಅಥವಾ ಸಾಲವಾಗಿ ಕೊಡುತ್ತೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಮುಫತ್ತಾಗಿ ಕೊಡುವ ಪದ್ಧತಿ ನಮ್ಮಲ್ಲಿಲ್ಲ. ಕೆಲವು ಕಡೆ ರೈತರಿಗೆ ಗೊಬ್ಬರ ಕೊಟ್ಟರೆ ಅವರು ಇಷ್ಟು ಭತ್ತ ಕೊಡಬೇ ಕೆಂದಿದೆ. For one maund of manure given so much of paddy will have to be given in return.

ಶ್ರೀ ಡಿ. ಆರ್. ಕರಿಗೌಡ.—ಹಿಂದೆಲ್ಲ ಗೊಬ್ಬರ, ಬೀಜ ಇತ್ಯಾದಿಗಳಿಗಾಗಿ ವ್ಯವಸಾಯದ ಇಲಾಖೆಯ ವರನ್ನು ಅಂಗಲಾಚಿಕೊಂಡಾಗ ಅವರು ಏನನ್ನೂ ಕೊಡದೆ ಇದ್ದ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ. ಅದಕ್ಕೋಸ್ಕರವಾಗಿಯೇ ಆ ಯೋಜನೆಯನ್ನು ಈಗ ರಿವೈಸ್ ಮಾಡಲಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಈಗ ಅನುಕೂಲಗಳನ್ನೇರ್ಪಡಿಸಲು ಜಿಲ್ಲಾವಾರು ಯಾರು ಯಾರನ್ನು ನೇಮಕ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಯಾರನ್ನೂ ನೇಮಕಮಾಡಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಾಗೆ ನೇಮಕ ಮಾಡ ತಕ್ಕವರಲ್ಲಿ ಈ ಬಗ್ಗೆ ಸ್ಪೆಷಲ್ ಟ್ರೈನಿಂಗ್ ಆದವರನ್ನೇ ನೋಡಿ ನೇಮಿಸುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಾಧ್ಯವಾದ ಮಟ್ಟಿಗೂ ಹಾಗೆ ಮಾಡಲಾಗುವುದು.

ಶ್ರೀ ಡಿ. ಆರ್. ಕರಿಗೌಡ.—ಈ ಬಗ್ಗೆ ಟ್ರೈನಿಂಗ್ ಪಡೆಯಲು ಯಾರನ್ನಾದರೂ ತಾವು ಕಳುಹಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರನ್ನು ಕಳುಹಿಸಿ ದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಅವರು ಯಾರು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ಕೋರಾ ಮಂದಿರಕ್ಕೆ ಕೆಲವರನ್ನು ಈ ವರ್ಷ ಕಳುಹಿಸಲಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಹಾಗೆ ತಾವು ಈ ವರ್ಷ ಅವರನ್ನು ಬೊಂಬಾಯಿಗೆ ಕಳುಹಿಸಿ, ಅವರು ಅಲ್ಲಿ ಪರಿಶ್ರಮ ಪಡೆದುಕೊಂಡು ಬರುವುದರೊಳಗೇ ಈ ವರ್ಷದ ಅವಧಿ ಎಂದರೆ ಬಿತ್ತನೆ ಕಾಲ ಪೂರೈಸುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಬಿತ್ತನೆ ಕಾಲ ಮೇ ಜೂನ್ ಅನಂತರ. ಆದರೆ ಅವರು ಟ್ರೈನಿಂಗ್ ತೆಗೆದು ಕೊಳ್ಳುವುದೆಲ್ಲಾ 3 ದಿವಸಗಳ ಕಾಲ ಮಾತ್ರ.

ಶ್ರೀ ಡಿ. ಆರ್. ಕರಿಗೌಡ.—ಈ ಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರವನ್ನು ಗ್ರಾಮಾಂತರ ಪ್ರದೇಶದಲ್ಲಿ ಮಾಡಲು ಆಲೋಚಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈ ವರ್ಷ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಇವುಗಳನ್ನೆಲ್ಲಾ ಆಲೋಚನೆಮಾಡಲಾಗುತ್ತದೆ.

Managing Committees of the Municipal High Schools.

Q.—118. **Sri B. P. NAGARAJA MURTHY** (Malavalli).—

Will the Government be pleased to state:—

(a) Whether the staff of the Municipal High Schools are represented on the Managing Committee of the respective schools;

(b) if not, whether they propose to make provision for such representation?

A.—**Sri A. G. RAMACHANDRA RAO** (Minister for Law and Education).—

(a) No.

(b) No.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಮುನಿಸಿಪಲ್ ಸ್ಕೂಲುಗಳ ಆಡಳಿತ ನಿರ್ವಾಹಕ ಸಮಿತಿಗಳಿಗೆ ಆಯಾ ಸ್ಕೂಲುಗಳ ಸಿಬ್ಬಂದಿಯ ಒಬ್ಬ ಪ್ರತಿನಿಧಿಗಳನ್ನು ನೇಮಿಸಿಕೊಳ್ಳುವುದರಿಂದ ಇವುಗಳ ಆಡಳಿತ ಸುವ್ಯವಸ್ಥೆಯಿಂದ ಮತ್ತು ಪ್ರಗತಿಮಾರ್ಗದಲ್ಲಿ ಮುಂದುವರಿಯಲು ಅನುಕೂಲವಾಗುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಆ ಅಭಿಪ್ರಾಯವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಸಬಾರ್ಡಿನೇಟ್ ಅಧಿಕಾರಿಗಳು ಸಮಿತಿಗಳಿಗೆ ಸದಸ್ಯರಾಗಲು ಅವಕಾಶವಿಲ್ಲವೆಂಬ ಪಾಲಸಿಗನುಗುಣವಾಗಿ ಹಾಗೆ ಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಕೆಲವು ಹೆಡ್ಮಾಸ್ಟರುಗಳು ಈಗ ಸಮಿತಿಗಳಲ್ಲಿ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿಲ್ಲವೆ? ಹೀಗೆ ಇರಬಾರದೆಂಬುದಕ್ಕೆ ಸರ್ಕಾರ ಏನಾದರೂ ಆರ್ಡರ್ ಮಾಡಿದೆಯೇ?

Sri A. G. RAMACHANDRA RAO. - One of the members will be the Secretary. But the Secretary need not be a member.

Grants to Scout, Girl Guide and Bharat Seva Dal Organisations.

Q.—145. **Sri N. C. NAGAIAH REDDY** (Goribidnur).—

Will the Government be pleased to state:—

(*a*) what is the budget provision made during 1952-53 for grants to (i) Scouts (ii) Girl Guides, (iii) Bharat Seva Dal;

(*b*) what is the amount drawn by each institution from 1st of April 1952 to up-to-date;

(*c*) the names of persons of the Committee or Board which is re-organising or controlling the Bharat Seva Dal Institution and operating on the grants made by them to it;

(*d*) whether Bharat Seva Dal is keeping regular accounts for the amounts called from the public and amounts drawn from the Government;

(*e*) whether the accounts are audited by a certified Auditor?

A.—**Sri A. G. RAMACHANDRA RAO** (Minister for Law and Education.

		Rs.
(*a*) (i) Scout Organisation	...	50,000
(ii) Girl Guide Organisation	...	4,863
(iii) Bharat Seva Dal Organisation	...	1,00,000

	Rs.	a.	p.
(*b*) (i) Scout Organisation	37,994	1	5
(ii) Girl Guide Organisation	4,863	0	0
(iii) Bharat Seva Dal Organisation	75,000	0	0

(*c*) List appended below.

(*d*) Yes.

(*e*) Yes.